**ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

ಸ್ಪೆಷಲ್ ಕೇಸ್ ನಂಃ 54/2022 ಪಿ.ಡಬ್ಲ್ಯೂಃ 5

ಸಿ.ಡಬ್ಲ್ಯೂಃ 2

| | |
|---|---|
| ಸಾಕ್ಷಿದಾರರ ಹೆಸರು | ಸಂದೀಪ ಆರ್. |
| ತಂದೆಯ ಹೆಸರು | ರಾಘು ಮೈಂಲಿ |
| ವಯಸ್ಸು | 34 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಉಚ್ಚಿಲ |

ದಿನಾಂಕಃ 13-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1) ನಾನು 2022 ರ ಇಸವಿಯಲ್ಲಿ ಉಚ್ಚಿಲ ಬಡಾ ಗ್ರಾಮದ ಪಂಚಾಯಿತಿಯ ಟೆಂಪೋದ ಚಾಲಕನಾಗಿ ಒಂದು ವರುಷದವರೆಗೆ ಕೆಲಸ ಮಾಡಿದ್ದೆ. ಆ ಟೆಂಪೋವನ್ನು ಪಂಚಾಯಿತಿಯವರು ಮನೆ ಮನೆಯಿಂದ ಕಸ ಸಂಗ್ರಹಿಸಲು ಬಳಸುತ್ತಿದ್ದರು. ಆ ಕೆಲಸವನ್ನು ಚಾಸಾ-1 ಇವರ ಮಗಳು ಶರಣ್ಯ ಇವರು ಗುತ್ತಿಗೆಗೆ ಪಡೆದಿದ್ದರು. ಆ ಕೆಲಸದ ಉಸ್ತುವಾರಿಯನ್ನು ಚಾಸಾ -1 ನೋಡಿಕೊಳ್ಳುತ್ತಿದ್ದರು. ನನಗೆ ಚಾಸಾ-3 ಮತ್ತು 4 ಗೊತ್ತು, ಅವರು ಕಸ ವಿಲೇವಾರಿಯಲ್ಲಿ ಹಮಾಲಿಯಾಗಿ ಕೆಲಸ ಮಾಡುತ್ತಿದ್ದರು.

2) ನಾವು ಸಂಗ್ರಹಿಸಿದ್ದ ಕಸವನ್ನು ಉಚ್ಚಿಲ ಮೀನು ಮಾರ್ಕೆಟ್ ಬಳಿಯ ಕಸ ಸಂಗ್ರಹಣ ಘಟಕದ ಬಳಿ ತಂದು ಹಾಕುತ್ತಿದ್ದೆವು. ಅಲ್ಲಿ ಹಸಿ ಕಸ ಮತ್ತು ಒಣ ಕಸವನ್ನು ಬೇರೆ ಮಾಡುತ್ತಿದ್ದೆವು. ಒಣ ಕಸವನ್ನು ನಿಟ್ಟೆಯಲ್ಲಿ ನಮ್ಮ ಘಟಟಕ್ಕೆ ಬೇರೆ ಗಾಡಿಯಲ್ಲಿ ಕಳುಹಿಸುತ್ತಿದ್ದೆವು. ಹಸಿ ಕಸವನ್ನು ಗೊಬ್ಬರ ಮಾಡುತ್ತಿದ್ದೆವು. ಉಳಿದ ಕಸವನ್ನು ಹಾಗೆಯೇ ಗೋಣಿ ಚೀಲದಲ್ಲಿ ತುಂಬಿ ಇಡುತ್ತಿದ್ದೆವು. ಹಾಗಾಗಿ ಕೂಡಿ ಇಟ್ಟಿದ್ದ ಕಸದಿಂದ ವಾಸನೆ ಬರುತ್ತಿದೆ ಎಂದು ಸಾರ್ವಜನಿಕರು ದೂರು ಮಾಡುತ್ತಿದ್ದರು. ಅದಕ್ಕಾಗಿ

ಪಂಚಾಯಿತಿಯವರು ಪೊಲ್ಯದಲ್ಲಿ ಪ್ರತ್ಯೇಕ ಜಾಗವನ್ನು ಗುರುತಿಸಿ, ಅಲ್ಲಿ ಕಸ ಹಾಕಲು ಚಾಸಾ-1 ಹೇಳಿದ್ದರು.

3) ದಿನಾಂಕ 25-02-2022 ರಂದು ಬೆಳಿಗ್ಗೆ 7.30 ಗಂಟೆಗೆ ಉಚ್ಚಿಲ ಘಟಕಕ್ಕೆ ಹೋಗಿದ್ದೆ. ಅಲ್ಲಿ ಚಾಸಾ-1, 3 ಮತ್ತು ಇನ್ನೊಬ್ಬ ಇದ್ದ. ಅಲ್ಲಿ ಚಾಸಾ-1 ಇವರು ಚಾಸಾ-9 ಇವರ ಟೆಂಪೋ ಒಂದನ್ನು ತರಿಸಿದ್ದರು.

ಈ ಹಂತದಲ್ಲಿ ಸಾಕ್ಷಿಯು ಸ್ಪಷ್ಟವಾಗಿ ಮಾತನಾಡದೇ ಹಿಂಜರಿಕೆಯಿಂದ ನಿಧಾನವಾಗಿ ಬೇರೆ ಬೇರೆ ಉತ್ತರಗಳನ್ನು ಕೊಡುತ್ತಿರುವುದರಿಂದ ಮತ್ತು ಅನ್ಯಸಾಕ್ಷಿಗಳ ವಿಚಾರಣೆ ಇರುವುದರಿಂದ, ಸಾಕ್ಷಿಗೆ ಪದೇ ಪದೇ ಸೂಚನೆ ಕೊಡುವುದು ವೇಳೆಯ ವ್ಯರ್ಥ ಪ್ರಯತ್ನ ಎಂದು ಕಂಡುಬಂದಿದ್ದರಿಂದ ಈ ದಿನ ವಿಚಾರಣೆಯನ್ನು ಮುಂದೂಡಿದೆ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.

ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಮುಂದುವರಿದ ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರಿಂದ**

4) ಆದಿನ ಅಲ್ಲಿ ಬಂದಿದ್ದ ಟೆಂಪೋ ಚಾಸಾ-9 ಇವರಿಗೆ ಸೇರಿದ್ದು. ಆ ಟೆಂಪೋಕ್ಕೆ ಕಸದ ಮೂಟೆಗಳನ್ನು ಲೋಡ್ ಮಾಡಿತ್ತು. ಅವುಗಳನ್ನು ಪೊಲ್ಯ ಜಾಗವೊಂದಕ್ಕೆ ಸಾಗಿಸಬೇಕಾಗಿತ್ತು. ಅದಕ್ಕಾಗಿ ನಾವು ಕಾರಿನಲ್ಲಿ ಮುಂದೆ ಹೋಗುತ್ತಿದ್ದೆವು. ನಮ್ಮ ಹಿಂದೆ ಟೆಂಪೋ ಬರುತ್ತಿತ್ತು. ನಾವು 8.30 ಗಂಟೆಗೆ ಪೊಲ್ಯ ತಲುಪಿದ್ದೆವು. ಅಲ್ಲಿ ಲೇಬರ್ ರವರು ಮೂಟೆ ತೆಗೆಯುತ್ತಿದ್ದರು. ಮೂಟೆ ಇಡಬೇಕಾಗಿದ್ದ ಜಾಗೆಗೆ ಟೆಂಪೋ ಹೋಗಲು ಆಗುತ್ತಿರಲಿಲ್ಲ. ಅದಕ್ಕಾಗಿ ಅಲ್ಲಿಯೇ ಟೆಂಪೋ ನಿಲ್ಲಿಸಿದ್ದರು. ಅಲ್ಲಿ 5 – 10 ಮೂಟೆಗಳನ್ನು ಇಳಿಸಿತ್ತು. ಅಲ್ಲಿ ಚಾಸಾ-1 ಮತ್ತು ಕೆಲಸದವರನ್ನು ಬಿಟ್ಟು

ನಾನು ಉಚ್ಚಿಲಕ್ಕೆ ಬಂದಿದ್ದೆ. ನಾನು ಅಲ್ಲಿ ಕಸದ ಲಾರಿ ಬಿಟ್ಟು ಬಂದ ನಂತರ ಏನಾಗಿತ್ತು ಎಂದು ಗೊತ್ತಿಲ್ಲ.

5) ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು, ಆದಿನ ನಾನು ಆತನನ್ನು ಅಲ್ಲಿ ನೋಡಿಲ್ಲ. ಆದಿನ ಆರೋಪಿ ಕಸ ಹಾಕುವ ವಿಚಾರದಲ್ಲಿ, ಚಾಸಾ -1 ಇವರೊಂದಿಗೆ ಜಗಳ ಮಾಡಿ, ಅವಮಾನ ಮಾಡಿ, ಹಲ್ಲೆ ಮಾಡಿದ್ದ ಬಗ್ಗೆ ಗೊತ್ತಿಲ್ಲ. ಚಾಸಾ-1 ಇವರಿಗೆ, ಪೆಟ್ಟಾಗಿ, ದೂರು ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನನ್ನು ವಿಚಾರಿಸಿಲ್ಲ. ಚಾಸಾ-1 ಮತ್ತು ಆರೋಪಿ ಯಾವ ಜಾತಿಗೆ ಸೇರಿದವರು ಎಂದು ಗೊತ್ತಿಲ್ಲ. ಆರೋಪಿ ನನಗೆ ಘಟನೆಯಾದ ಒಂದು ವರ್ಷದ ನಂತರದಿಂದ ಪರಿಚಯ.

**( ಈ ಹಂತದಲ್ಲಿ ಸರಕಾರಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲು ಮಾಡಲು ಸರಕಾರಿ ಅಭಿಯೋಜಕರಿಗೆ ಅನುಮತಿ ಕೊಡಲಾಯಿತು)**

**ಪಾಟಿಸವಾಲು: ಸರಕಾರಿ ಅಭಿಯೋಜಕರಿಂದ:**

1) ಆದಿನ ಲೋಡ್ ಮಾಡಿದ ಚಾಸಾ-9 ಇವರ ಟೆಂಪೋದೊಂದಿಗೆ ಚಾಸಾ-3, 4, 5 ಮತ್ತು ಮಂಜು ಎಂಬವರು ಬಂದಿದ್ದರು ಎಂದರೆ, ಮಂಜು ನೆನಪಿಲ್ಲ, ಚಾಸಾ-3, 4, 5 ಬಂದಿದ್ದರು. ಚಾಸಾ-9 ಇವರ ಟೆಂಪೋದಿಂದ ಕಸದ ಮೂಟೆಗಳನ್ನು ಇ ಳಿಸುತ್ತಿದ್ದಾಗ, ನ್ಯಾಯಾಲಯದ ಮುಂದೆ ಇರುವ ಆರೋಪಿ ಅಲ್ಲಿಗೆ ಬಂದು, ಕಸ ಹಾಕುತ್ತಿದ್ದವರಿಗೆ ಯಾರ ಅಪ್ಪನಾ ಜಾಗೆ ಎಂದು ಕಸ ಹಾಕುತ್ತಿದ್ದೀರಿ ಎಂದು ಹೇಳಿ, ಕಾರ್ಮಿಕರಿಗೆ ಹಲ್ಲೆ ಮಾಡಲು ಹೋಗುತ್ತಿದ್ದಾಗ, ಚಾಸಾ-1, ಆರೋಪಿಗೆ ಕೆಲಸಗಾರರ ಮೈ ಮುಟ್ಟಬೇಡಿ ಎಂದು ಹೇಳಿದ್ದರು ಎಂದರೆ ಗೊತ್ತಿಲ್ಲ. ಆಗ ಚಾಸಾ-1 ಇವರಿಗೆ,ಆರೋಪಿ ಚಾಸಾ-1 ಇವರಿಗೆ ''ಸೂಳೆ ರಂಡೇ ಎಂದು ಬೈಯುತ್ತಾ, ಚಾಸಾ-1 ಈಕೆಗೆ ಕೀಳು ಜಾತಿಯವಳು ಎಂದು ಬೈದು, ನಿನಗೆ ಮಾಡಲು ಬೇರೆ ಕೆಲಸಾ ಇಲ್ಲವಾ ಎಂದು ಬೈದಿದ್ದರು'' ಎಂದರೆ ಗೊತ್ತಿಲ್ಲ. ಅರೋಪಿ ಚಾಸಾ-1 ಇವರ ಎಡಕೆನ್ನೆಗೆ ಹಲ್ಲೆ ಮಾಡಿ, ಅವರ ಕೈಯಲ್ಲಿ ಇದ್ದ ಮೊಬೈಲ್ ನ್ನು ಕಿತ್ತು ರಸ್ತೆಗೆ ಎಸೆದಿದ್ದರು ಎಂದರೆ ಗೊತ್ತಿಲ್ಲ. ಆರೋಪಿ, ಚಾಸಾ-1 ಇವರಿಗೆ ಇನ್ನೊಂದು ಬಾರಿ ಆ ಜಾಗೆಯ ಹತ್ತಿರ ಬಂದರೆ ಕೈಕಾಲು ಕತ್ತರಿಸುವುದಾಗಿ ಹೇಳಿದ್ದ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ-6 ಅಲ್ಲಿಗೆ

ಬರುತ್ತಿರುವುದನ್ನು ನೋಡಿ ಆತ ಹೋಗಿದ್ದ ಎಂದರೆ ಸರಿಯಲ್ಲ. ಆಗ ಅಲ್ಲಿಗೆ ಬಂದಿದ್ದ ಪಂಚಾಯಿತಿಯ ಅಧಿಕಾರಿಗಳು ಸಹ, ಚಾಸಾ-1 ಇವರನ್ನು ವಿಚಾರಿಸಿದ್ದರು ಎಂದರೆ, ಗೊತ್ತಿಲ್ಲ. ನಂತರ ಅಲ್ಲಿಗೆ ಚಾಸಾ-1 ಹೇಳಿದ್ದರಿಂದ, ಅನ್ ಲೋಡ್ ಮಾಡಿದ ಮೂಟೆಗಳನ್ನು ಪುನಃ ಲೋಡ್ ಮಾಡಿ ತಂದಿದ್ದೆವು ಎಂದರೆ ಸರಿಯಲ್ಲ. ಈ ಘಟನೆಗಾಗಿ ಚಾಸಾ-1 ನಂತರ ದೂರು ಕೊಟ್ಟಿದ್ದರು ಎಂಬುದಕ್ಕಾಗಿ ಪೊಲೀಸರು ನನ್ನನ್ನು ವಿಚಾರಿಸಿದ್ದರು ಎಂದರೆ ಸರಿಯಲ್ಲ. ಅದಕ್ಕಾಗಿ ದಿಃ 26-02-2022 ರಂದು ವಿಚಾರಿಸಿದಾಗ, ಈಗ ಓದಿದ ಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು **ನಿಶಾನೆ ಪಿ-13** ಎಂದು ಗುರುತಿಸಿದೆ.

2) ನನಗೆ ಚಾಸಾ-1 ಕೊಟ್ಟ ದೂರಿನ ಬಗ್ಗೆ ಗೊತ್ತಿದ್ದರೂ ಸಹ, ಈಗ ನಾನು ಆರೋಪಿಗೆ ಹೆದರಿ ಈ ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರವಾಗಿಃ ಶ್ರೀ ಟಿ.ವಿ.ಕೆ.ಎಸ್. ವಕೀಲರಿಂದ ಇಲ್ಲ ಎಂದು ಸಲ್ಲಿಸಿದ್ದಾರೆ**

-ಮರುವಿಚಾರಣೆ ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ಕೆ.ಎಸ್.ಗಂಗಣ್ಣವರ್)
ಪ್ರಧಾನ ಜಿಲ್ಲಾ ಮತ್ತು ಸತ್ರ/ವಿಶೇಷ ನ್ಯಾಯಾಧೀಶರು,
ಉಡುಪಿ.